# ಆಧುನಿಕ ಮಾಧ್ಯಮಗಳಲ್ಲಿ ಸಂತ ಶಿಶುನಾಳ ಶರೀಫರು

**ಮಹೇಶ ಅಂಗಡಿ**

ಕನ್ನಡ ಉಪನ್ಯಾಸಕರು, ಕೆ.ಎಲ್.ಇ ಸಂಸ್ಥೆಯ ಕಲಾ ಹಾಗೂ ವಾಣಿಜ್ಯ ಪದವಿ ಮಹಾವಿದ್ಯಾಲಯ, ಸಂಶಿ.

DOI: https://doi.org/10.5281/zenodo.17257713

## ABSTRACT:

ಸಂತ ಶಿಶುನಾಳ ಶರೀಫರು ಕರ್ನಾಟಕದ ಜನಮನಗಳನ್ನು ಗೆದ್ದ ತತ್ವಜ್ಞಾನಿ, ಕವಿ ಹಾಗೂ ಸಮಾಜ ಸೇವಕರಾಗಿದ್ದಾರೆ. ಅವರ ತತ್ವಪದಗಳು ಸರಳತೆ, ಸಾಂದ್ರತೆ ಮತ್ತು ಸಾಮಾಜಿಕ ಸಮಾನತೆಗಾಗಿ ಹೋರಾಡುವ ದೃಷ್ಟಿಕೋನವನ್ನು ವ್ಯಕ್ತಪಡಿಸುತ್ತವೆ. ಈ ಚಿಂತನೆಗಳು ಕೇವಲ ಮಠಮಂದಿರಗಳಲ್ಲದೆ ಆಧುನಿಕ ಮಾಧ್ಯಮಗಳ ಮೂಲಕವೂ ವ್ಯಾಪಕವಾಗಿ ಹರಡಿವೆ. ಆಕಾಶವಾಣಿ (ರೇಡಿಯೋ) ಮೂಲಕ ಶರೀಫರ ತತ್ವಪದಗಳು ಜನಪದ ಗೀತೆ, ಸುಗಮ ಸಂಗೀತ, ಭಜನೆ ಹಾಗೂ ನಾಟಕ ರೂಪಕಗಳಲ್ಲಿ ಪ್ರಸಾರಗೊಂಡು ಜನಮನೆಗಳಿಗೆ ತಲುಪಿವೆ. ದೂರದರ್ಶನದಲ್ಲಿ 'ಈಶ್ವರ ಅಲ್ಲಾ ನೀನೇ ಎಲ್ಲಾ' ಧಾರಾವಾಹಿ ಹಾಗೂ 'ತತ್ವರಸಾಯನ' ಕಾರ್ಯಕ್ರಮಗಳ ಮೂಲಕ ಶರೀಫರ ಜೀವನ ಹಾಗೂ ತತ್ವಗಳನ್ನು ದೃಶ್ಯರೂಪದಲ್ಲಿ ಪ್ರೇಕ್ಷಕರು ಕಂಡಿದ್ದಾರೆ. ಚಲನಚಿತ್ರ ಮಾಧ್ಯಮದ ಮೂಲಕ ಟಿ.ಎಸ್.ನಾಗಾಭರಣ ನಿರ್ದೇಶಿಸಿದ 'ಸಂತ ಶಿಶುನಾಳ ಶರೀಫ' ಚಿತ್ರವು ಅವರ ತತ್ವಪದಗಳನ್ನು ಜೀವಂತಗೊಳಿಸಿ ಅಂತರಾಷ್ಟ್ರೀಯ ಮಟ್ಟದ ಮೆಚ್ಚುಗೆಯನ್ನೂ ಪಡೆದಿದೆ. ಹೀಗಾಗಿ, ಆಧುನಿಕ ಮಾಧ್ಯಮಗಳು ಶಿಶುನಾಳ ಶರೀಫರ ಸಂದೇಶವನ್ನು ಇಂದಿನ ಪೀಳಿಗೆಗೂ ತಲುಪಿಸುವಲ್ಲಿ ಶ್ರೇಷ್ಠ ಪಾತ್ರ ವಹಿಸಿವೆಯೆಂದು ಹೇಳಬಹುದು.

## KEYWORDS:

ಸಂತ ಶಿಶುನಾಳ ಶರೀಫ, ತತ್ವಪದಗಳು, ಆಧುನಿಕ ಮಾಧ್ಯಮಗಳು, ಆಕಾಶವಾಣಿ, ದೂರದರ್ಶನ, ಚಲನಚಿತ್ರ, ಕನ್ನಡ ಸಾಹಿತ್ಯ, ಸಾಮಾಜಿಕ ಚಿಂತನೆ.

ಪ್ರಾಚೀನ ಕಾಲದಿಂದಲೂ ಮಾನವನು ತನ್ನ ಅಗತ್ಯಗಳಿಗೆ ತಕ್ಕಂತೆ ಅನ್ವೇಷಣೆಗಳನ್ನು ಮಾಡುತ್ತಾ ಬಂದಿರುವನು. ಅವನ ಬುದ್ಧಿಭಾವಗಳು ಸದಾಕಾಲವೂ ಹೊಸತನಕ್ಕಾಗಿ ತುಡಿಯುತ್ತಿರುತ್ತವೆ. ನವನವೋಲ್ಲೇಖ ಶಾಲಿನಿಯಂತೆ ಅವನು ಸದಾಕಾಲವೂ ಏನನ್ನಾದರೂ ಮಾಡುತ್ತಿರುತ್ತಾನೆ, ಅವನ ಈ ಸ್ವಭಾವಕ್ಕೆ ಮೂಲ ಕಾರಣ, ಅವನಿಗೆ ಮಾತ್ರ ಸಾಧ್ಯವಿರುವ ಭಾಷೆ ಎಂಬ ಸೂತ್ರ. ಈ ಸೂತ್ರವನ್ನು ಹಿಡಿದು ಏನನ್ನಾದರೂ ಮಾಡುವ ಶಕ್ತಿ ಸಾಮರ್ಥ್ಯ ಸಾಧಿಸಿಕೊಂಡಿದ್ದಾನೆ. ಅಲ್ಲದೇ ಮಾನವನು ಬಹುತೇಕವಾಗಿ ಏಕಾಂಗಿಯಾಗಿರಲು ಬಯಸುವುದಿಲ್ಲ. ಕಾರಣ ಅವನಲ್ಲಿರುವ ಸಮೂಹ ಪ್ರಜ್ಞೆ, ಅದಕ್ಕಾಗಿಯೇ "ಮನುಷ್ಯ ಸಮಾಜ ಜೀವಿ" ಎಂದು ಸಮಾಜಶಾಸ್ತ್ರಜ್ಞರು ಹೇಳುತ್ತಾರೆ. "ಆಧುನಿಕ ಜಗತ್ತಿನಲ್ಲಿ ಮಾಧ್ಯಮಗಳು ಜ್ಞಾನ ಪ್ರಸಾರದ ಬಹುಮುಖ್ಯ ಸಾಧನಗಳಾಗಿವೆ. ಮಾಹಿತಿ ತಂತ್ರಜ್ಞಾನದ ಬಹುಮುಖ್ಯ ಶಾಖೆಗಳಾದ ಸಮೂಹ ಮಾಧ್ಯಮಗಳು ಬೌದ್ಧಿಕ ಹಾಗೂ ಭೌತಿಕ ಪ್ರಗತಿಯಲ್ಲಿ 'ಸಮೂಹ ಮಾಧ್ಯಮ' ತುಂಬಾ ಪರಿಣಾಮಕಾರಿಯಾಗಿದೆ"।

ಇಂತಹ ಆಧುನಿಕ ಮಾಧ್ಯಮಗಳು ಸಂತ ಶಿಶುನಾಳ ಶರೀಫರ ಜೀವನವನ್ನು ಕುರಿತು, ಶರೀಫರ ತತ್ವಪದಗಳನ್ನು, ಶರೀಫರ ಪವಾಡಗಳನ್ನು ಕುರಿತು ಪ್ರಸರಣ ಮಾಡಿವೆ. ಸಂತ ಶಿಶುನಾಳ ಶರೀಫರ ಸಾಹಿತ್ಯವನ್ನು ವೇಗವಾಗಿ ಜನರಿಗೆ ತಲುಪುವಂತೆ ಆಧುನಿಕ ಮಾಧ್ಯಮಗಳು ಮಾಡಿವೆ ಎಂದು ಹೇಳಬಹುದು. ಆಧುನಿಕ ಮಾಧ್ಯಮಗಳಲ್ಲಿ ನಾನು ಆಯ್ಕೆ ಮಾಡಿಕೊಂಡಿರುವ ಮಾಧ್ಯಮಗಳೆಂದರೆ. ರೇಡಿಯೋ, ಚಲನಚಿತ್ರ, ನಾಟಕಗಳು. ಇತರೆ ಆಧುನಿಕ ಮಾಧ್ಯಮಗಳು.

**ರೇಡಿಯೋ:**

ಸಂತ ಶಿಶುನಾಳ ಶರೀಫರ ಜೀವನವನ್ನು ಕುರಿತು ಮತ್ತು ಅವರ ತತ್ವಗಳನ್ನು ಪ್ರಸರಣ ಮಾಡಿದ್ದಾರೆ. ಆಕಾಶವಾಣಿಯಲ್ಲಿ ಶರೀಫರ ಕುರಿತು ಅನೇಕ ಕಾರ್ಯಕ್ರಮಗಳು ಪ್ರಸರಣಗೊಂಡಿವೆ. ಶರೀಫರ ಹಾಡುಗಳು ಜನರಿಗೆ ತಲುಪಲು ಅತ್ಯಂತ ಸಹಾಯಕವಾಗಿರುವ ಮಾಧ್ಯಮವೆಂದರೆ ಆಗಿನ ಕಾಲದಲ್ಲಿ ರೇಡಿಯೋ ಒಂದು ಪ್ರಮುಖ ಮಾಧ್ಯಮವಾಗಿದೆ ಹೇಳಬಹುದು.

ಧಾರವಾಡ ಆಕಾಶವಾಣಿ ಕೇಂದ್ರ ಬರೀ ಸಂಪರ್ಕ ಮಾಧ್ಯಮವಾಗಿ ಕೆಲಸವನ್ನು ನಿರ್ವಹಿಸಿಲ್ಲ. ರಾಷ್ಟ್ರೀಯಅಂತಾರಾಷ್ಟ್ರೀಯ ಮಟ್ಟದ ಕಲಾವಿದರು, ಸಾಹಿತಿಗಳು, ಸಂಗೀತಗಾರರನ್ನು ಹುಟ್ಟು ಹಾಕಿ ಅವರ ಪ್ರತಿಭೆಗೆ ಪ್ರೋತ್ಸಾಹವನ್ನು ನೀಡಿದೆ. ಹಿಂದೂಸ್ತಾನಿ ಸಂಗೀತದ ದಿಗ್ಗಜರಾದ ಪಂ॥ಮಲ್ಲಿಕಾರ್ಜುನ ಮನ್ಸೂರ, ಪಂ॥ಭೀಮಸೇನ್ ಜೋಶಿ, ಪಂ॥ಗಂಗೂಬಾಯಿ ಹಾನಗಲ್ ಅಂತವರು, ಸಿತಾರ್ ವಾದನದಲ್ಲಿ ಬಾಲೆಖಾನ್ ಸಹೋದರರು, ಜಾನಪದ ಸಂಗೀತದಲ್ಲಿ ಬಾಳಪ್ಪ ಹುಕ್ಕೇರಿ,

ರಂಗಭೂಮಿಯಲ್ಲಿ ನಾಡೋಜ ಡಾ॥ ಏಣಗಿ ಬಾಳಪ್ಪ, ಚಿಂತನ ಮತ್ತು ವಿಚಾರ ವಾಗ್ದೇವಿ ಯಲ್ಲಿ ಡಾ॥ ಎಂ.ಎಂ.ಕಲಬುರ್ಗಿ, ಡಾ। ಗಿರೀಶ ಕಾರ್ನಾಡ, ಜಾನಪದ ಕ್ಷೇತ್ರದಲ್ಲಿ ಡಾ। ಚಂದ್ರಶೇಖರ ಕಂಬಾರ, ಅಸಂಗತ ವೈಚಾರಿಕತೆ ಕುರಿತು ಪ್ರೊ॥ ಚಂಪಾ, ಡಾ॥ ಗಿರಡ್ಡಿ ಗೋವಿಂದರಾಜ, ಡಾ॥ ಮಾಲತಿ ಪಟ್ಟಣಶೆಟ್ಟಿ ಹೀಗೆ ಅನೇಕರ ಧ್ವನಿಯನ್ನು ಪ್ರಸರಣ ಮಾಡಿದೆ.

ಸುಮಾರು 73 ವರ್ಷಗಳ ಇತಿಹಾಸವನ್ನು ಒಳಗೊಂಡಿರುವ ಆಕಾಶವಾಣಿಯು. ಶರೀಫರ ತತ್ವ ಚಿಂತನೆಗಳನ್ನು ಅತೀ ಹೆಚ್ಚು ಪ್ರಸರಣ ಮಾಡಿವೆ. ಶರೀಫರ ಹಾಡುಗಳನ್ನು ಅಷ್ಟೇ ಅಲ್ಲದೆ ಶರೀಫರ ಜೀವನವನ್ನು ಕುರಿತು ಶರೀಫರ ವಿಚಾರಗಳನ್ನು ಕುರಿತು ಆಕಾಶವಾಣಿಯಲ್ಲಿ ಪ್ರಸರಣ ಮಾಡಿದ್ದಾರೆ. ಶ್ರೀ ಶಶಿಧರ್ ನರೇಂದ್ರ ಸರ್ ಹೇಳಿದ ಹಾಗೆ ಆಕಾಶವಾಣಿಯಲ್ಲಿ ಪ್ರಸರಣವಾದ ಪ್ರಮುಖ ಅಂಶಗಳು ಇಂತಿವೆ. ಸುಮಾರು 73 ವರ್ಷಗಳ ಇತಿಹಾಸವನ್ನು ಒಳಗೊಂಡಿರುವ ಆಕಾಶವಾಣಿ ಕೇಂದ್ರವು ಶರೀಫರ ಹಾಡುಗಳಿಗೆ ಸುಗಮ ಸಂಗೀತದ ಸೊಬಗನ್ನು ಒದಗಿಸಿದ ಮಾಧ್ಯಮವೆಂದು ಹೇಳಬಹುದು. ಜನಪದ ಕಲಾವಿದರು, ಅದರ ಜೊತೆಗೆ ಸುಗಮ ಸಂಗೀತ ಮತ್ತು ಜನಪದ ರೂಪದೊಳಗಡೆ ಶಿಶುನಾಳ ಶರೀಫರ ತತ್ವಪದಗಳನ್ನು ಪ್ರಸರಣಗೊಂಡಿವೆ. ಆಗಿನ ಕಾಲದಲ್ಲಿ ಶರೀಫರ ತತ್ವ ಚಿಂತನೆಗಳ ಪ್ರಸಾರದಿಂದ ಬೇಸತ್ತ ಮನಕ್ಕೆ ಮನರಂಜನೆಯನ್ನು ಒದಗಿಸಿವೆ. ಜೊತೆಗೆ ರೂಪಕಗಳನ್ನು ಸಹ ಪ್ರಸಾರಗೊಂಡಿವೆ. ಪ್ರಮುಖವಾಗಿ ಆಕಾಶವಾಣಿ ಕೇಂದ್ರದಲ್ಲಿ ಶಿಶುನಾಳ ಶರೀಫರ ಹಾಡುಗಳನ್ನು ಸುಗಮ ಸಂಗೀತದಲ್ಲಿ ಜೊತೆಗೆ ಭಜನಾ ಪದಗಳ ರೂಪದಲ್ಲಿ, ಜನಪದ ಕಲಾವಿದರ ಮೂಲಕ, ರೂಪಕಗಳ ಮೂಲಕವಾಗಿ ಪ್ರಸರಣ ಮಾಡಿದ್ದಾರೆ. ಸುಗಮ ಸಂಗೀತದಲ್ಲಿ ಶರೀಫರ ಹಾಡುಗಳನ್ನು ಹಾಡಿದವರು ಅನುರಾಧ ದಾನೇಶ್ವರಿ, ಪಂಡಿತ ಎಂ ವೆಂಕಟೇಶ್ ಕುಮಾರ ಅವರು, ಅಪರ್ಣ ಅವರು, ಹನುಮಂತಸಿಂಗ್ ಹಾನಗಲ್ ಶರೀಫರ ಪದಗಳನ್ನು ತಮ್ಮ ಸುಮಧುರ ಕಂಠದಿಂದ ಹಾಡಿ ಜನರ ಮೆಚ್ಚುಗೆಗೆ ಪಾತ್ರರಾಗುವುದರ ಜೊತೆಗೆ ಶರೀಫರ ಹಾಡುಗಳಿಗೆ ಹೊಸ ಕಳೆಯನ್ನು ಒದಗಿಸಿದ್ದಾರೆ ಎನ್ನಬಹುದು.

**ಶರೀಫರು ಬರೆದಿರುವ,**

**“ಎಡೆ ಒಯ್ಯುನ ಬಾರೆ ದೇವರಿಗೆ**
**ಎಡೆ ಒಯ್ಯುನ ಬಾರೆ”**

ಈ ಹಾಡನ್ನು ಹನುಮಂತಸಿಂಗ್ ಹಾನಗಲ್ ಮತ್ತು ಪಂಚಾಕ್ಷರ ಸ್ವಾಮಿ ಮತ್ತಿಗಟ್ಟಿ ಅವರು ಸುಗಮ ಸಂಗೀತದಲ್ಲಿ ಹಾಡಿದ್ದಾರೆ.

ಸಂಗೀತಾ ಕಟ್ಟಿಯವರು ಶರೀಫರ “ಶ್ರೀ ಗುರು ಮಂತ್ರವ ರಾಗದಿ ನುತಿಸಲು

ಭೋಧ ಸಂಪದ ಸುಖವಾಗುವದೋ'' ಮತ್ತು 'ಕುಂಬಾರಕಿ ಈಕಿ ಕುಂಬಾರಕಿ ಈ

ಬ್ರಹ್ಮಾಂಡವೆಲ್ಲ ತುಂಬಿಕೊಂಡಿರುವ' ಹಾಡುಗಳನ್ನು ಇಂಪಾದ ಸಂಗೀತದೊಂದಿಗೆ ಹಾಡಿದ್ದಾರೆ.

ವಿಧೂಷಿ ರೇಣುಕಾ ನಾಖೋಡ ಅವರು ''ತರವಲ್ಲ ತಗಿ ನಿನ್ನ ತಂಬೂರಿ ಸ್ವರ ಬರದೆ ಬಾರಿಸದಿರೋ ತಂಬೂರಿ'' ಹಾಡಿದ್ದಾರೆ.

ಮಲ್ಲಿಕಾರ್ಜುನ ಮನ್ಸೂರ ಅವರು 'ತೇರನೆಳೆಯುತ್ತಾರೆ ಬಾರೆ ನೋಡಲಿಕ್ಕೆ ಹೋಗೋಣ ಬಾರೆ' ಪದವನ್ನು ಇವರ ಮಧುರವಾದ ಕಂಠ ಸಿರಿಯಲ್ಲಿ ಮೂಡಿ ಬಂದಿದೆ.

ಎಮ್ ಎಸ್ ಕಾಮತ್ ಅವರು 'ಗುರುನಾಥ ರಕ್ಷಿಸೋ ಕರುಣಾಕರ' ಎನ್ನುವ ಹಾಡನ್ನು ಹಾಡಿದ್ದಾರೆ.

ಸಿ ಆಶ್ವತ್, ಅನಂತ ಕುಲಕರ್ಣಿ, ಈಶ್ವರಪ್ಪ ಮಿನಚಿ ಸಮೂಹ ಗಾಯನದಲ್ಲಿ ಶರೀಫರ ಹಾಡಿಗಳನ್ನು ಹಾಡಿದ್ದರೆ.

'ಹಾಕಿದ ಜನಿವಾರವ ಸದ್ಗುರುನಾಥ

ಹಾಕಿದ ಜನಿವಾರವ ॥ಪ॥

ಹಾಕಿದ ಜನಿವಾರವ ನೂಕಿದ ಭವಭಾರ

ಬೇಕೆನುತಲಿ ಹೇಮಜ್ಞಾನ ಉಚ್ಚರಿಸೆಂದು ॥ಅ.ಪ॥ ಈ ಹಾಡನ್ನು ಪಂಡಿತ. ಎಂ. ವೆಂಕಟೇಶ ಕುಮಾರ ಅವರು ಇಂಪಾಗಿ ಹಾಡಿದ್ದಾರೆ.

'ನಗೆಯು ಬರುತಿದೆ ಜಗದಾಟ ನೋಡಿ

ಸುಗುಣನಾಗಿ ಸುಮ್ಮನೆ ಸುಜ್ಞಾನದಿ

ಅಗಣಿತ ಮಹಿಮೆಯ ಆಡಿದ ಪುರುಷನಿಗೆ'

ಮತ್ತು 'ಶ್ರೀ ಗುರು ಮಂತ್ರವ' ಎನ್ನುವ ಶರೀಫರ ಹಾಡುಗಳನ್ನು ಚಂದ್ರಶೇಖರ ಪುರಾಣಿಕ ಮಠ ಅವರ ಸಿರಿಕಂಠದಲ್ಲಿ ಪ್ರಸರಣಗೊಂಡಿವೆ.

ಈಶ್ವರಪ್ಪ ಮಿಣಚಿ ಯವರು 'ಶಂಕರಿ ದಯಮಾಡೇ, ಪಂಕಜ ಲೋಚನ' ಹಾಡನ್ನು ಹಾಡಿದ್ದಾರೆ.

ಸಮೂಹಗಾಯಣದಲ್ಲಿ ಮೂಡಿ ಬಂದ ಶರೀಫರ ಹಾಡುಗಳು.

'ಕೂ ಕೂ ಎನುತಿದೆ ಬೆಳವಾ

ಬಂದು ಹೊಕ್ಕಿತು ಭವವೆಂಬ ದುಃಖದ ಹಳವಾ'

'ಆರತಿ ಬೆಳಗುವೆನು ಯೋಗದ

ಆರತಿ ಬೆಳಗುವೆನು'

'ಗುಡಿಯ ನೋಡಿರಣ್ಣಾ ದೇಹದ ಗುಡಿಯ ನೋಡಿರಣ್ಣಾ'

'ದಾಸರೋ ಹರಿ ದಾಸರೋ'

'ನಾನಾರೆಂಬುದು ನಾನಲ್ಲಾ ಈ ಮಾನುಷ ಜನ್ಮವು ನಾನಲ್ಲಾ'

ಹೀಗೆ ಇನ್ನೂ ಹಲವು ಗೀತೆಗಳನ್ನು ಸಮೂಹಗಾಯಣದಲ್ಲಿ ಪ್ರಸಾರಗೊಂಡಿವೆ ಮತ್ತು ಪ್ರಸಾರಗೊಳ್ಳುತ್ತಿವೆ. ಈಗಲೂ ಸಹ ಶರೀಫರ ಹಾಡುಗಳನ್ನು ಇಂತಹ ಹಲವು ಕಾರ್ಯಕ್ರಮಗಳ ಮೂಲಕ ಜನರಿಗೆ ತಲುಪಿಸುವ ಕೆಲಸವನ್ನು ಆಕಾಶವಾಣಿಯು ಮಾಡುತ್ತಿದೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ರೇಡಿಯೋಗಳು ಇಲ್ಲವಾಗಿವೆ. ಬೆರಳಿನೆಣಿಕೆ ಯಷ್ಟು ಮಾತ್ರ ನಮಗೆ ಸಿಗುತ್ತವೆ. ಡಿ ಕುಮಾರದಾಸರು 'ಬಾಳೆ ನೀಲಾಂಜನ' ಎಂಬ ಕಾರ್ಯಕ್ರಮದ ಮೂಲಕ ಸಂತ ಶಿಶುನಾಳ ಶರೀಫರ ಜೀವನ ವೃತ್ತಾಂತ ಮತ್ತು ಅವರ ಹಾಡುಗಳನ್ನು ಕುರಿತು ಕಾರ್ಯಕ್ರಮವು ನಡೆಯುತ್ತಿತ್ತು.

'ಅರ್ಪಣಾ' ಎನ್ನುವ ಕಾರ್ಯಕ್ರಮವು ನೇರ ಪ್ರಸಾರದಲ್ಲಿ ಪ್ರಸರಣಗೊಂಡಿದೆ. ಶರೀಫರ ಜನ್ಮದಿನದಂದು ಅಂದರೆ ಪ್ರತಿವರ್ಷ ಜುಲೈ 22 ರಂದು ಈ ಕಾರ್ಯಕ್ರಮವನ್ನು ನೇರ ಪ್ರಸಾರದಲ್ಲಿ ಶ್ರೀ ಶಶಿಧರ ನರೇಂದ್ರ ಸರ್ ನಡೆಸಿಕೊಡುತ್ತಾರೆ. ಈ ನೇರ ಪ್ರಸಾರದಲ್ಲಿ ಶರೀಫರ ತತ್ವ ಚಿಂತನೆಗಳು ಮತ್ತು ಶರೀಫರ ಜೀವನ, ಜೊತೆಗೆ ಶರೀಫರ ಜನಪ್ರಿಯ ಆಯ್ದ ಹಾಡುಗಳನ್ನು ಪ್ರಸಾರವಾಗಿವೆ. ಆದರೆ ಈಗಿನ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಬದಲಾವಣೆ ತಂದಿರುವುದರಿಂದ ಅದು ಅಲ್ಪಸ್ವಲ್ಪ ಬದಲಾಗಿದೆ. ಆದರೆ ಅಂದು ಶಿಶುನಾಳ ಶರೀಫರ ವಿಚಾರಧಾರೆಗಳನ್ನು ಅವರ ತತ್ವಪದಗಳನ್ನು ಜನರಿಗೆ ಜನರ ಮನಸ್ಸಿಗೆ ಮುಟ್ಟಿಸುವ ಕೆಲಸವನ್ನು ಆಕಾಶವಾಣಿ ಮಾಡಿದೆ ಎಂದು ಹೇಳಬಹುದು. ಅಲ್ಲದೆ ಸಂತ ಶಿಶುನಾಳ ಶರೀಫರ ಹಾಡುಗಳನ್ನು ಸಮೂಹ ಗಾಯನದಲ್ಲಿ ಸುಗಮ ಸಂಗೀತದಲ್ಲಿ, ಭಜನಾ ಪದಗಳಲ್ಲಿ, ಜನಪದ ಗೀತೆಗಳ ಮೂಲಕ, ನಾಟಕಗಳ ಮೂಲಕ, ರೂಪಕಗಳ ಮೂಲಕ ಉತ್ತಮವಾಗಿ ಪ್ರಸರಣ ಮಾಡಿದ್ದಾರೆ. ನಮ್ಮ ಆಕಾಶವಾಣಿಯಲ್ಲಿ ಶಿಶುನಾಳ ಶರೀಫರ ಕಾರ್ಯಕ್ರಮವೆಂದರೆ ಅದು ಅತ್ಯುತ್ತಮ ಕಾರ್ಯಕ್ರಮವೆಂದು ಮತ್ತು ಜನಪ್ರಿಯ ಕಾರ್ಯಕ್ರಮವೆಂದು ಶಶಿಧರ ನರೇಂದ್ರ ಸರ್ ಅಭಿಪ್ರಾಯ ಪಟ್ಟರು

ಶರೀಫರ ತತ್ವ ಚಿಂತನೆಗಳನ್ನು ಕುರಿತು ಹಲವು ಕಾರ್ಯಕ್ರಮಗಳನ್ನು ಇಂದಿಗೂ ನೀಡುತ್ತಿರುವವರು ಸ. ಸ ಡಾ. ಎ ಸಿ ವಾಲಿ ಗುರುಗಳು ಇವರು ಶರೀಫರ

ಶಿಷ್ಯ ಬಳಗದಲ್ಲಿ ಒಬ್ಬರು ಆಧ್ಯಾತ್ಮಿಕ ಚಿಂತಕರು ಮತ್ತು ಶಿಕ್ಷಕರಾಗಿರುವ ಇವರು ಶರೀಫರ ತತ್ವದರ್ಶಗಳನ್ನು ಮೈಗೂಡಿಸಿಕೊಂಡಿರುವವರು. ವಾಲಿ ಗುರುಗಳು ಶರೀಫರ ಹಲವು ವಿಚಾರಗಳನ್ನು ತಮ್ಮ ಭಾಷಣಗಳ ಮೂಲಕ ಜನರಿಗೆ ತಲುಪಿಸಿದ್ದಾರೆ. ಆಕಾಶವಾಣಿಯಲ್ಲಿ ಇವರ ಕಾರ್ಯಕ್ರಮವು ಬೇರೆ ಬೇರೆ ಹೆಸರುಗಳಿಂದ ಪ್ರಸಾರ ಮಾಡಿದ್ದಾರೆ. ಈಗಲೂ ಪ್ರಸಾರ ಮಾಡುತ್ತಿರುತ್ತಾರೆ. ಶರೀಫರ ಸಮಾಜಪರವಾದ ಚಿಂತನೆಗಳನ್ನು, ಅವರ ಹಾಡುಗಳ ಅರ್ಥ ವಿವರಣೆಯನ್ನು ನೀಡುತ್ತಾ ಶರೀಫರ ಬದುಕಿದ ಬಗೆಯನ್ನು ತಮ್ಮ ಮಾತುಗಳಲ್ಲಿ ಪ್ರಸ್ತುತ ಪಡಿಸುತ್ತಾರೆ. ಈ ಕಾರ್ಯಕ್ರಮವು ಜನರ ಮೆಚ್ಚುಗೆಯನ್ನು ಗಳಿಸಿದೆ ಎನ್ನುತ್ತಾರೆ ಆಕಾಶವಾಣಿ ಕೇಂದ್ರದವರು.

ಪ್ರಸಾರ ಭಾರತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಕಾಶವಾಣಿ ಕೇಂದ್ರದಲ್ಲಿ ಏ.13ರಿಂದ ಹೊಸ ನಿಯಮಗಳು ಜಾರಿಯಾಗಿದ್ದು, ಸ್ಥಳೀಯ ದೇಶಿ ಸೊಗಡಿನ ಕಾರ್ಯಕ್ರಮಗಳಿಗೆ ಬ್ರೇಕ್ ಹಾಕಲಾಗಿದೆ. ಚಿಂತನ, ರೈತರಿಗೆ ಸಲಹೆ, ಜನಪದ ಸಂಗೀತ, ಕೃಷಿ ರಂಗ, ಗಿಳಿವಿಂಡು, ಎಳೆಯರ ಬಳಗ, ಸುಗಮ ಸಂಗೀತ, ಬಸವ ಐಸಿರಿ, ಶ್ರೀಕೃಷ್ಣ ಪಾರಿಜಾತ, ಹೀಗೆ ಹತ್ತಾರು ಕಾರ್ಯಕ್ರಮಗಳಿಗೆ ಸದ್ಯಕ್ಕೆ ಬ್ರೇಕ್ ಬಿದ್ದಿದೆ. ಅದೂ ಅಲ್ಲದೇ ಯುವರಂಗದಂತಹ ಕಾರ್ಯಕ್ರಮದಲ್ಲಿ ದೇಶ, ಭಾಷೆ, ಸಂಸ್ಕೃತಿ ಸೇರಿದಂತೆ ಅನೇಕ ಉತ್ತಮ ಸಂಗೀತಗಳ ಮೇಲೆ ಬೆಳಕು ಚೆಲ್ಲುವ ಚಿಂತನಮಂಥನ ನಡೆಸುವ ಹಾಗೂ ಅದರೊಂದಿಗೆ ಒಂದಿಷ್ಟು ಚಿತ್ರಗೀತೆಗಳನ್ನು ಪ್ರಸಾರ ಮಾಡುವ ಕಾರ್ಯಕ್ರಮಗಳು ಪ್ರಸಾರವಾಗುತ್ತಿಲ್ಲ.

**ದೂರದರ್ಶನ:**

ದೂರದರ್ಶನಕ್ಕೆ ಬಹಳ ಸುದೀರ್ಘವಾದ ಇತಿಹಾಸವಿಲ್ಲ. ಇದು 20ನೆಯ ಶತಮಾನದಲ್ಲಿ ಬೆಳಕಿಗೆ ಬಂದುದು. ಇಂಗ್ಲೆಂಡಿನ 'ಜಾನ್ ಲಾಗಿ ಬೇಯರ್ಡ್' ಎಂಬುವರು ದೂರದರ್ಶನ ಕಂಡು ಹಿಡಿದರು. ವಿಶ್ವದ ಮೊದಲ ದೂರದರ್ಶನ ಪ್ರಸಾರ ಆರಂಭವಾದದ್ದು ಬ್ರಿಟನ್‌ನಲ್ಲಿ. ಇದು 1936 ರಲ್ಲಿ ಆರಂಭವಾಯಿತು. 1945 ರ ಹೊತ್ತಿಗೆ ಅಮೇರಿಕದಲ್ಲಿ ಪ್ರಸಾರ ಆರಂಭವಾಯಿತು. ನಂತರದಲ್ಲಿ ದೂರದರ್ಶನ ಜನರಿಗೆ ಹೊಸ ಲೋಕವನ್ನು ತೆರೆಯಿತು. ಕರ್ನಾಟಕದಲ್ಲಿ ಮೊದಲ ದೂರದರ್ಶನ ಪ್ರಸಾರ ಕೇಂದ್ರ 1977 ರಲ್ಲಿ ಗುಲ್ಬರ್ಗಾ ನಗರದಲ್ಲಿ ಪ್ರಾರಂಭವಾಯಿತು. 1981 ರಿಂದ ಬೆಂಗಳೂರಿನಲ್ಲಿ ಒಂದು ತಾತ್ಕಾಲಿಕ ಪ್ರಸಾರ ಕೇಂದ್ರ ಸ್ಥಾಪನೆಯಾಗಿ ಮುಂಬಯಿ ಮತ್ತು ಮದರಾಸು ಪ್ರಸಾರ ಕೇಂದ್ರದ ಕಾರ್ಯಕ್ರಮವನ್ನು ಮರು ಪ್ರಸಾರ ಮಾಡುತ್ತಿತ್ತು. ನವೆಂಬರ್ ತಿಂಗಳು 1983 ರಲ್ಲಿ ಬೆಂಗಳೂರಿನಿಂದಲೇ ಕನ್ನಡ ಕಾರ್ಯಕ್ರಮಗಳನ್ನು ಪ್ರಾರಂಭಿಸಿತು.

ಇತ್ತೀಚಿನ ದಿನಗಳಲ್ಲಿ ಇದು ಅತ್ಯಂತ ಪ್ರಬಲವಾದ ಸಮೂಹ ಮಾಧ್ಯಮವಾಗಿ ಬೆಳೆದುನಿಂತಿದೆ. ಹಲವಾರು ಸಮೂಹ ಮಾಧ್ಯಮಗಳು ಮಾಡುವ ಕೆಲಸವನ್ನು ದೂರದರ್ಶನವೊಂದೇ ನಿರ್ವಹಿಸುತ್ತಿದೆ. ಈ ಕಾರಣಕ್ಕಾಗಿ ಇದು ಅತ್ಯಂತ ಜನಪ್ರಿಯ ಸಮೂಹ ಮಾಧ್ಯಮವಾಗಿದೆ. ಇದನ್ನು ಮಾಯಾ ಪೆಟ್ಟಿಗೆಯಂತಲೂ ಕರೆಯುತ್ತಾರೆ. ಅಕ್ಷರಸ್ಥ ಮತ್ತು ಅನಕ್ಷರಸ್ಥರಿಬ್ಬರಿಗೂ ಅತ್ಯಂತ ಪರಿಣಾಮಕಾರಿ ಸಂವಹನ ನಡೆಸುವ ಏಕೈಕ ಮಾಧ್ಯಮ ಇದಾಗಿದೆ. ಪತ್ರಿಕೆಗಳು, ಸಿನೆಮಾ, ರೇಡಿಯೋ ಇವುಗಳ ಬಹುಪಾಲು ಕೆಲಸವನ್ನು ದೂರದರ್ಶನ ಸುಲಭವಾಗಿ ನಿರ್ವಹಿಸುತ್ತದೆ. ಮಕ್ಕಳಿಂದ ವೃದ್ಧರವರೆಗೆ ಎಲ್ಲರೂ ಅಪೇಕ್ಷೆ ಪಡುವ ಸಮೂಹ ಮಾಧ್ಯಮ ಇದಾಗಿದೆ. ಸಾವಿರಾರು ಮೈಲುಗಳಾಚೆಯ ಘಟನೆಗಳನ್ನು ನಮ್ಮೆದುರಿನಲ್ಲೇ ನಡೆಯುವಂತೆ ಅನುಭವಿಸಬಹುದು. ಉತ್ತಮ ಸಭೆಸಮಾರಂಭ, ಕ್ರೀಡೆ ಮುಂತಾದವುಗಳನ್ನು ನಡೆಯುತ್ತಿರುವಾಗಲೇ ನೋಡಬಹುದು. ಸಂವಹನ ಕ್ರಿಯೆಯಲ್ಲಿ ದೂರದರ್ಶನವು ಖಚಿತವಾದ ಪ್ರಗತಿಯನ್ನು ತೋರಿಸಿ, ಸಮಾಜದ ಎಲ್ಲ ವರ್ಗದ, ಧರ್ಮದ ಜನರನ್ನು ಸಂವಹನ ಕ್ರಿಯೆಯ ತೆಕ್ಕೆಗೆ ತೆಗೆದುಕೊಂಡಿದೆ. ಬೆಂಗಳೂರು ದೂರದರ್ಶನ ಚಂದನದಲ್ಲಿ 'ಸಂತ ಶಿಶುನಾಳ ಶರೀಫರ' ಹಾಗೂ ಕಳಸದ "ಗುರು ಗೋವಿಂದಭಟ್ಟರ" ಜೀವನಾಧಾರಿತ ಧಾರಾವಾಹಿಯನ್ನು 'ಈಶ್ವರ ಅಲ್ಲಾ ನೀನೇ ಎಲ್ಲಾ' ಎಂಬ ಹೆಸರಿನಿಂದ ಯಜಮಾನ್ ಎಂಟರ್‌ಪ್ರೈಸಸ್‌ನ ಮೂಲಕ ಮೂಡಿ ಬಂದಿದೆ. ಶ್ರೀಹರಿ ಎಲ್. ಖೋಡೆಯವರ ಈ ಧಾರಾವಾಹಿಯ ನಿರ್ಮಾಪಕರು. ರೇಣುಕಾ ಶರ್ಮಾ ಅವರು ಚಿತ್ರಕಥೆನಿರ್ದೇಶನ ಮಾಡಿದ್ದಾರೆ. ಸಂಭಾಷಣೆ ಹಾಗೂ ಶೀರ್ಷಿಕೆ ಗೀತೆಯನ್ನು ಗೋಡೂರಿಯವರು ನಿರ್ವಹಿಸಿದ್ದಾರೆ. 'ಈಶ್ವರ ಅಲ್ಲಾ ನೀನೆ ಎಲ್ಲಾ, ನಿನ್ನಾ ಪದಗಳೆ ತತ್ವದ ಮೂಲಾ, ತೆರೆದು ನೀನು ಅರಿವಿನ ಬಾಗಿಲ ಬೆಳಗಿದೆ ಎಲ್ಲಾ ಮನಗಳ' ಎಂಬ ಗೀತೆಯೊಂದಿಗೆ ಪ್ರಾರಂಭವಾಗುತ್ತಿತ್ತು. ಇಂದಿಗೂ ಈ ಗೀತೆಯು ಜನರ ಬಾಯಲ್ಲಿ ನಲಿದಾಡುತ್ತದೆ. ಇಂಪಾದ ಸಂಗೀತದೊಂದಿಗೆ ಭಾವೈಕ್ಯತೆ, ಜಾತಿ, ಧರ್ಮ, ಗುರುವಿನ ಭಕ್ತಿ ಎಲ್ಲವನ್ನು ಮಿಶ್ರಣ ಮಾಡಿಕೊಂಡು ಹಾಡನ್ನು ರಚಿಸಿದ್ದಾರೆ.

ಕಥೆಯ ಮೂಲವನ್ನು ಡಾ॥ ಮಲ್ಲಿಕಾರ್ಜುನ ಸಿಂದಗಿಯವರ 'ಸಂತ ಶಿಶುನಾಳ ಶರೀಫರ ಜೀವನ ಲೀಲಾಮೃತ', ಡಾ॥ ಶಿವಾನಂದ ಗುಬ್ಬಣ್ಣವರ 'ಬರಕೋ ಪದಾ ಬರಕೋ', ಕಳಸದ ಹನುಮಜೋಷಿ ಹಾಗೂ ಸುತ್ತಮುತ್ತಲಿನ ಊರಿನ ಅನೇಕ ಗುರು ಹಿರಿಯರ ಹೇಳಿಕೆಗಳ ಆಧಾರದೊಂದಿಗೆ ಕಥೆಯನ್ನು ಬರೆದು ಧಾರಾವಾಹಿಯಲ್ಲಿ ಚಿತ್ರಿಸಿದ್ದಾರೆ. ಈ ಧಾರಾವಾಹಿಯಲ್ಲಿ ಶರೀಫರ ಹಾಗೂ ಗುರು ಗೋವಿಂದಭಟ್ಟರ ಜೀವನದಲ್ಲಿ ನಡೆದ ಘಟನೆಗಳು ಅವರು ಸಂಚರಿಸಿದ ಊರು ಮತ್ತು ಸ್ಥಳಗಳಲ್ಲಿ ಚಿತ್ರೀಕರಣ ಮಾಡಿದ್ದಾರೆ. ಶರೀಫರ ತತ್ವಪದಗಳು ಜನರ ಮನಸ್ಸಿಗೆ ಹತ್ತಿರವಾಗಲು ಕಾರಣವಾದವೋ. ಊರು ಮತ್ತು ಸ್ಥಳಗಳಲ್ಲಿ ಚಿತ್ರೀಕರಣ

ಮಾಡಿದ್ದರಿಂದ ಧಾರಾವಾಹಿಗೆ ನೈಜತೆಯನ್ನು ತಂದದ್ದು ವಿಶೇಷವಾಗಿದೆ. ರೇಣುಕಾ ಶರ್ಮಾ ಅವರ ನಿರ್ದೇಶನದೊಂದಿಗೆ ಮೂಡಿಬಂದ ಈ ಧಾರಾವಾಹಿ ಎಷ್ಟು ಜನಪ್ರಿಯವಾಗಿತ್ತೆಂದರೇ, ಧಾರಾವಾಹಿಯು ದೂರದರ್ಶನದಲ್ಲಿ ಪ್ರಸಾರವಾಗುವ ಸಮಯದಲ್ಲಿ ಒಬ್ಬರು ರಸ್ತೆಯಲ್ಲಿ ಓಡಾಡುತ್ತಿರಲಿಲ್ಲ. ಈ ಧಾರಾವಾಹಿ ಪ್ರಸಾರದಿಂದ ಶರೀಫರನ್ನು ಹಾಗೂ ಗುರು ಗೋವಿಂದ ಭಟ್ಟರನ್ನು ದೇಶ ವಿದೇಶಗಳಲ್ಲಿರುವ ಕನ್ನಡಿಗರು ಬಹಳ ಆಸಕ್ತಿ ಮತ್ತು ಶ್ರದ್ಧೆಯಿಂದ ತಿಳಿಯುವಂತಾಯಿತು. ಧಾರಾವಾಹಿಯು ಗೋವಿಂದಭಟ್ಟರ ಪಾಠಶಾಲೆಯಿಂದ ಪ್ರಾರಂಭವಾಗಿ ಶರೀಫರ ದೇಹ ಬಿಡುವವರೆಗಿನ ಸಂದರ್ಭಗಳನ್ನು ಧಾರಾವಾಹಿಯಲ್ಲಿ ಚಿತ್ರಿಸಿದ್ದಾರೆ.

ಸಂತ ಶಿಶುನಾಳ ಶರೀಫರ ತತ್ವಪದಗಳನ್ನು ಜನರಿಗೆ ಮುಟ್ಟಿಸಿದ ಇನ್ನೊಂದು ಕಾರ್ಯಕ್ರಮವೆಂದರೆ, ದೂರದರ್ಶನದಲ್ಲಿ ಪ್ರಸಾರವಾಗುತ್ತಿದ್ದ ತತ್ವರಸಾಯನ ಕಾರ್ಯಕ್ರಮ. ಶ್ರೀ ಮಹೇಶ ಜೋಶಿಯವರು ಶರೀಫರ ಮತ್ತು ಗುರು ಗೋವಿಂದ ಭಟ್ಟರ ಕಾರ್ಯಕ್ರಮಗಳನ್ನು ದೂರದರ್ಶನದಲ್ಲಿ ಅತೀ ಹೆಚ್ಚು ಪ್ರಸರಣ ಮಾಡಿಸಿದ್ದಾರೆ. ಶರೀಫರ ತತ್ವಪದಗಳನ್ನು ಭಜನೆ, ಸುಗಮ ಸಂಗೀತದಲ್ಲಿ, ಜನಪದದಲ್ಲಿ, ನೃತ್ಯಗಳನ್ನು ಈ ಕಾರ್ಯಕ್ರಮದಲ್ಲಿ ಪ್ರಸರಣ ಮಾಡಿದ್ದಾರೆ. ಈ ಕಾರ್ಯಕ್ರಮ ಅತೀ ವೇಗವಾಗಿ ಜನರಿಗೆ ತಲುಪಿತು. ಆಗಿನ ಸಂದರ್ಭದಲ್ಲಿ ಅತೀ ಹೆಚ್ಚು ಪ್ರೇಕ್ಷಕ ವರ್ಗವನ್ನು ಹೊಂದಿದ ಕಾರ್ಯಕ್ರಮವಾಗಿತ್ತು. ಹೀಗೆ ದೂರದರ್ಶನದಲ್ಲಿ ಶರೀಫರ ಜೀವನ, ತತ್ವಪದಗಳು, ಗುರು ಗೋವಿಂದ ಭಟ್ಟರ ಮತ್ತು ಶರೀಫರ ಗುರು ಶಿಷ್ಯರ ಸಂಬಂಧವನ್ನು ಹಲವು ಕಾರ್ಯಕ್ರಮಗಳಲ್ಲಿ ಪ್ರಸಾರ ಮಾಡಿದ್ದಾರೆ.

**ಚಲನಚಿತ್ರ:**

**ಸಂತ ಶಿಶುನಾಳ ಶರೀಫ ಚಲನಚಿತ್ರ:**

ಕನ್ನಡ ಚಲನಚಿತ್ರ ರಂಗದಲ್ಲಿ 'ಸಂತ ಶಿಶುನಾಳ ಶರೀಫ' 1990ರ ಭಾರತೀಯ ಕನ್ನಡ ಜೀವನ ಚರಿತ್ರೆಯ ನಾಟಕ ಚಲನಚಿತ್ರವಾಗಿದ್ದು. ಈ ಚಿತ್ರವನ್ನು ಟಿ.ಎಸ್. ನಾಗಾಭರಣ ನಿರ್ದೇಶಿಸಿದ್ದಾರೆ. ಮತ್ತು ಯಜಮಾನ್ ಎಂಟರ್‌ಪ್ರೈಸಸ್‌ನಲ್ಲಿ ಶ್ರೀಹರಿ ಖೋಡೆ ಮತ್ತು ಮಹಿಮಾ ಪಟೇಲ್ ನಿರ್ಮಿಸಿದ್ದಾರೆ. ಈ ಚಲನಚಿತ್ರದಲ್ಲಿ ಸಂತ ಶಿಶುನಾಳ ಶರೀಫರ ಜೀವನದ ಚಿತ್ರಣವನ್ನು ಕುರಿತು ಮೂಡಿಬಂದಿದೆ. ಆಗಿನ ಕಾಲದಲ್ಲಿ ಈ ಸಿನಿಮಾ ದೊಡ್ಡ ಹೆಸರನ್ನು ಮಾಡಿತ್ತು. ಚಲನಚಿತ್ರದ ಕುರಿತು ಈ ಕೆಳಗಿನಂತೆ ನೋಡಬಹುದು.

ಸಂತ ಶಿಶುನಾಳ ಶರೀಫ ಚಲನಚಿತ್ರ

ನಿರ್ದೇಶನ : ಟಿ ಎಸ್ ನಾಗಾಭರಣ

ಚಿತ್ರಕಥೆ : ಟಿ ಎಸ್ ನಾಗಾಭರಣ, ಸಿ ಅಶ್ವಥ್, ಬಸವರಾಜ ಬರೆದಿದ್ದಾರೆ.

ನಿರ್ಮಾಪಕರು: ಶ್ರೀಹರಿ ಖೋಡೆ ಮತ್ತು ಮಹಿಮಾ ಪಟೇಲ್

ನಟರು: ಶ್ರೀಧರ್, ಗಿರೀಶ್ ಕಾರ್ನಾಡ್, ಹೇಮಾ ಚೌಧರಿ, ಸುಮನ್ ರಂಗನಾಥನ್, ಮಾಸ್ಟರ್ ಜಯಂತ್, ಎಸ್ ರಾಮಚಂದ್ರ

ಸಂಪಾದನೆ: ಸುರೇಶ್ ಅರಸ್

ಸಂಗೀತ: ಸಿ ಅಶ್ವಥ್

ಬಿಡುಗಡೆ ದಿನಾಂಕ: 1 ಜನವರಿ 1990

ಚಲನಚಿತ್ರದ ಸಮಯ: 119 ನಿಮಿಷಗಳು

ಚಿತ್ರದ ಪಾತ್ರವರ್ಗದಲ್ಲಿ ಶ್ರೀಧರ್ ಅವರು ಗಿರೀಶ್ ಕಾರ್ನಾಡ್, ಸುಮನ್ ರಂಗನಾಥನ್ ಮತ್ತು ದತ್ತಾತ್ರೇಯ, ಹೇಮಾ ಚೌಧರಿ ಸೇರಿದಂತೆ ಇತರರನ್ನು ಒಳಗೊಂಡಿತ್ತು.

ಚಿತ್ರವು ಬಿಡುಗಡೆಯಾದ ನಂತರ ವಿಮರ್ಶಕರು ಮತ್ತು ಪ್ರೇಕ್ಷಕರಿಂದ ವ್ಯಾಪಕವಾಗಿ ಮೆಚ್ಚುಗೆ ಗಳಿಸಿತು. ಇದು ರಾಷ್ಟ್ರೀಯ ಏಕೀಕರಣದ ಅತ್ಯುತ್ತಮ ಚಲನಚಿತ್ರಕ್ಕಾಗಿ ನರ್ಗೀಸ್ ದತ್ ಪ್ರಶಸ್ತಿಯನ್ನು ಗೆದ್ದುಕೊಂಡಿತು. ಚಲನಚಿತ್ರವು ಅತ್ಯುತ್ತಮ ಚಲನಚಿತ್ರ, ಅತ್ಯುತ್ತಮ ನಟ ಮತ್ತು ಅತ್ಯುತ್ತಮ ಪೋಷಕ ನಟ ವಿಭಾಗಗಳನ್ನು ಒಳಗೊಂಡಂತೆ ಅನೇಕ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನು ಸಹ ಪಡೆಯಿತು

**ಕಥಾವಸ್ತು:**

ಶಿಶುನಾಳ ಶರೀಫರು 1829 ರಲ್ಲಿ ಕರ್ನಾಟಕದ ಧಾರವಾಡ ಜಿಲ್ಲೆಯ ಶಿಶುವಿನಹಾಳ ಎಂಬ ಗ್ರಾಮದಲ್ಲಿ ಮುಸ್ಲಿಂ ಕುಟುಂಬದಲ್ಲಿ ಜನಿಸಿದರು. ಹಿಂದೂ ಮತ್ತು ಮುಸ್ಲಿಂ ಸಂಪ್ರದಾಯಗಳನ್ನು ಆಚರಿಸಿಕೊಂಡು ಬಂದವರು. ಶರೀಫರ ಗುರುಗಳು ಬ್ರಾಹ್ಮಣರಾದ ಗುರು ಗೋವಿಂದ ಭಟ್ಟರು. ಗುರುವಿನ ಗರಡಿಯಲ್ಲಿ ಶರೀಫರು ತಮ್ಮ ದೈವತ್ವದ ಶಕ್ತಿಯನ್ನು ಪ್ರದರ್ಶನ ಮಾಡಿದವರು. ಶರೀಫರು ವಚನ ಸಾಹಿತ್ಯದ ಬಗ್ಗೆ ಆಸಕ್ತಿಯಿತ್ತು ಎನ್ನಲು ಅವರು ರಚಿಸಿದ ಪ್ರಭುಲಿಂಗ ಲೀಲೆ ಒಂದು ಉತ್ತಮ ಉದಾಹರಣೆಯಾಗಿದೆ. ಅಲ್ಲಮಪ್ರಭುಗಳನ್ನು ಕುರಿತು ಶರೀಫರು ಪ್ರಭುಲಿಂಗ ಲೀಲೆಯಲ್ಲಿ ಹೇಳಿದ್ದಾರೆ. ಜಾತಿ, ಮತ ಮತ್ತು ಧರ್ಮದ ಅಸಮಾನತೆಗಳನ್ನು ತ್ಯಜಿಸಿ ಹಿಂದೂಮುಸ್ಲಿಂ ಏಕತೆಯನ್ನು ಆಧರಿಸಿದ ಬದುಕಿದವರು ಶರೀಫರು. ಬಡತನ ಮತ್ತು ಹೆಂಡತಿ ಅಗಲಿಕೆಯ ನಂತರ ಈ ಪ್ರಾಂಪಂಚಿಕ ಬದುಕಿನಿಂದ ಮುಕ್ತಿಯನ್ನು

ಪಡೆದುಕೊಂಡು ಸಾಧನೆಯ ಹಾದಿ ಹಿಡಿದವರು. ಗುರು ಗೋವಿಂದ ಭಟ್ಟರ ತತ್ವಾದರ್ಶಗಳು ಶರೀಫರಲ್ಲಿ ಹೊಸ ಹುಟ್ಟಿಗೆ ಕಾರಣವಾಗಿತ್ತು.

ಶರೀಫರ ಪಾತ್ರದಲ್ಲಿ ಶ್ರೀಧರ್, ಗೋವಿಂದ ಭಟ್ಟರ ಪಾತ್ರದಲ್ಲಿ ಗಿರೀಶ್ ಕಾರ್ನಾಡ್, ಶರೀಫರ ಪತ್ನಿಯ ಪಾತ್ರದಲ್ಲಿ (ಫಾತಿಮಾ) ಸುಮನ್ ರಂಗನಾಥನ್, ಶರೀಫರ ತಂದೆ ಪಾತ್ರದಲ್ಲಿ (ಇಮಾಮ್ ಸಾಹೇಬರು) ಆಗಿ ಎಚ್.ಜಿ.ದತ್ತಾತ್ರೇಯ, ತಾಯಿಯ ಪಾತ್ರವನ್ನು (ಹಜ್ಜುಮಾ) ಹೇಮಾ ಚೌಧರಿ, ಬಾಲ ನಟರಾಗಿ ಮಾಸ್ಟರ್ ಜಯಂತ್ ಬ್ರಹ್ಮಾವರ, ಇತರೆ ಪಾತ್ರದಲ್ಲಿ ವೆಂಕಟರಾವ, ವಿಶ್ವನಾಥ ರಾವ, ಶಂಕರರಾವ್, ಪ್ರೇಮ್‌ಕುಮಾರ ಇನ್ನು ಹಲವು ಪೋಷಕ ಪಾತ್ರಗಳನ್ನು ಬಳಸಿಕೊಂಡು ಚಿತ್ರವನ್ನು ತೆಗೆದಿದ್ದಾರೆ.

ಚಲನಚಿತ್ರಕ್ಕೆ ಸಿ.ಅಶ್ವಥ್ ಸಂಗೀತ ಸಂಯೋಜಿಸಿದ್ದಾರೆ. ಈ ಚಿತ್ರಕ್ಕಾಗಿ ರಚಿಸಲಾದ ಎಲ್ಲಾ 16 ಹಾಡುಗಳು ಕವಿ ಶಿಶುನಾಳ ಶರೀಫರ ಸಾಹಿತ್ಯ ಕೃತಿಗಳ ಸಂಗ್ರಹದಿಂದ ಬಂದವುಗಳಾಗಿವೆ. ಹಾಡುಗಳನ್ನು ಜನಪ್ರಿಯ ಸುಗಮ ಸಂಗೀತ ಗಾಯಕರು ಹಾಡಿದ್ದಾರೆ. ಸಿ.ಅಶ್ವಥ್ ಅವರು ಕೂಡಾ ಹಾಡಿದ್ದಾರೆ. ಒಂದು ಸಮಯದಲ್ಲಿ ಶರೀಫರ ಹಾಡುಗಳನ್ನು ಜನಪ್ರಿಯ ಗೊಳಿಸಿದವರು ಅಶ್ವಥ್. ಪೂಜ್ಯ ಶರೀಫರು ಸನ್ನಿವೇಶಕ್ಕೆ ಅನುಗುಣವಾಗಿ ಕನ್ನಡದಲ್ಲಿ ಕವಿತೆಗಳನ್ನು ರಚಿಸುತ್ತಿದ್ದರು ಮತ್ತು ಅವರ ಜೀವನ ತತ್ವವನ್ನು ಮತ್ತು ಸಾರ್ವತ್ರಿಕ ಸಹೋದರತ್ವವನ್ನು ಸಾರಲು ಅವುಗಳನ್ನು ಹಾಡುತ್ತಿದ್ದರು. ಹೀಗಾಗಿಯೇ ಅವರನ್ನು ಕರ್ನಾಟಕದ ಕಬೀರ ಎಂದು ಕರೆಯುತ್ತಾರೆ. ಅವರು ಎಂದಿಗೂ ತಮ್ಮ ಕವನಗಳನ್ನು ಕಾಗದದ ಮೇಲೆ ಹಾಕದಿದ್ದರೂ ಸಹ, ಸಂಯೋಜನೆಗಳನ್ನು ಬಾಯಿಮಾತಿನ ಮೂಲಕ ರವಾನಿಸಿದ್ದರಿಂದ ಅವುಗಳನ್ನು ಇನ್ನೂ ಅನೇಕರು ಹಾಡುತ್ತಾರೆ. ಇಂತಹ ಹಾಡುಗಳನ್ನು ಚಲನಚಿತ್ರದಲ್ಲಿ ಸಂಗೀತ ಸಂಯೋಜನೆಯೊಂದಿಗೆ ಸುಂದರವಾಗಿ ಹಾಡಿದ್ದಾರೆ.

**ಚಲನಚಿತ್ರದಲ್ಲಿ ಬಳಸಿರುವ ಶಿಶುನಾಳ ಶರೀಫರ ಹಾಡುಗಳು:**

1. "ಸವಾಲೊಂದು ನಿನ್ನ ಮೇಲ್

ಶಾಹಿರ ಕೇಳ್" ಹಾಡಿದವರು ಯಶವಂತ ಹಳಿಬಂಡಿ

2. "ಕೂ ಕೂ ಎನುತಿದೆ ಬೆಳವಾ

ಬಂದು ಹೊಕ್ಕಿತು ಭವವೆಂಬ ದುಃಖದ ಹಳವಾ"॥5॥ ಹಾಡಿದವರು ಬಿ.ಆರ್. ಛಾಯಾ

3. "ಹಾಕಿದ ಜನಿವಾರವ ಸದ್ಗುರುನಾಥ

ಹಾಕಿದ ಜನಿವಾರವ" ಹಾಡಿದವರು ಶಿವಮೊಗ್ಗ ಸುಬ್ಬಣ್ಣ & ಬಿ.ಆರ್.ಛಾಯಾ

4. "ಅಳಬೇಡ ತಂಗಿ ಅಳಬೇಡ ನಿನ್ನ

ಕಳುಹಬಂದವರಿಲ್ಲಿ ಉಳಿದುಕೊಳ್ಳುವವರಿಲ್ಲ"॥7॥ ಹಾಡಿದವರು ಶಿವಮೊಗ್ಗ ಸುಬ್ಬಣ್ಣ

5. " ಬಿದ್ದಿಯಬೇ ಮುದುಕಿ

ನೀ ದಿನಾ ಹೋದಾಕಿ ಬಲು ಜೋಕಿ

ಬಿದ್ದಿಯಬೇ ಮುದುಕಿ"

ಹಾಡಿದವರು ಶಿವಮೊಗ್ಗ ಸುಬ್ಬಣ್ಣ

6. "ಕೊಡಗಿನ ಕೋಳಿ ನುಂಗಿತ

ನೋಡವ್ವ ತಂಗಿ" ಹಾಡಿದವರು ಸಿ.ಅಶ್ವಥ್

7. "ಸ್ನೇಹ ಮಾಡಬೇಕಿಂತವಳಾ

ಒಳ್ಳೇ ಮೋಹದಿಂದಲಿ ಬಂದು ಕೂಡುವಂಥವಳಾ" ಹಾಡಿದವರು ಸಿ.ಅಶ್ವಥ್

8. "ಮೋಹದ ಹೆಂಡತಿ ತೀರಿದ ಬಳಿಕ

ಮಾವನ ಮನೆಯ ಹಂಗಿನ್ನೇಕೋ" ಹಾಡಿದವರು ಸಿ. ಅಶ್ವಥ್

9. "ಎಲ್ಲರಂಥವನಲ್ಲ ನನ್ನ ಗಂಡ

ಬಲ್ಲಿದನು ಪುಂಡ

ಎಲ್ಲರಂಥವನಲ್ಲ ನನ್ನ ಗಂಡ" ಹಾಡಿದವರು ಸಿ.ಅಶ್ವಥ್

10. "ಸೋರುತಿಹುದು ಮನೆಯ ಮಾಳಿಗಿ ಅಜ್ಞಾನದಿಂದ

ಸೋರುತಿಹುದು ಮನೆಯ ಮಾಳಿಗೆ" ಹಾಡಿದವರು ಸಿ.ಅಶ್ವಥ್

11. "ಗುಡಿಯ ನೋಡಿರಣ್ಣಾ ದೇಹದ

ಗುಡಿಯ ನೋಡಿರಣ್ಣಾ"॥14॥ ಹಾಡಿದವರು ಸಿ.ಅಶ್ವಥ್

12. "ನಡಿಯೋ ದೇವರ ಚಾಕರಿಗೆ ಮುಕ್ತಿ

ಒಡೆಯ ಖಾದರಲಿಂಗ ನೆಲಸಿರ್ಪ ಗಿರಿಗೆ" ಹಾಡಿದವರು ಸಿ.ಅಶ್ವಥ್

13. “ತರವಲ್ಲ ತಗಿ ನಿನ್ನ ತಂಬೂರಿ

ಸ್ವರ ಬರದೆ ಬಾರಿಸದಿರು ತಂಬೂರಿ”॥16॥ ಹಾಡಿದವರು ಸಿ. ಅಶ್ವಥ್

14. “ನಾನಾರೆಂಬುದು ನಾನಲ್ಲಾ ಈ

ಮಾನುಷ ಜನ್ಮವು ನಾನಲ್ಲಾ” ಹಾಡಿದವರು ಸಿ.ಅಶ್ವಥ್

15. “ದುಃಖಮೆ ಪಡಾ ಮನ್ ಸುಖ ನಹಿ ಮಾಯಾ

ಟಕತಿ ಮರನ ರಖವಾಲರೆ” ಹಾಡಿದವರು ಸಿ. ಅಶ್ವಥ್

16. “ಹಮ್ ತೋ ದೇಖಾ ಮಹಮ್ಮದ ನೂರೆಗಂವರ್

ರಮ್ತೇ ಜಾಕರ್ ಆತಸೆ ತವಾಪ್ ಕರ್” ಹಾಡಿದವರು ಸಿ. ಅಶ್ವಥ್

ಪ್ರಸ್ತುತ ಚಲನಚಿತ್ರದಲ್ಲಿ ಶರೀಫರ ಜೀವನವನ್ನು ಕುರಿತು ಮತ್ತು ಅವರು ಮಾಡಿರುವ ಪವಾಡಗಳನ್ನು ಚಿತ್ರಿಸುವದರ ಜೊತೆಗೆ 16 ಶರೀಫರ ತತ್ವಪದಗಳನ್ನು ಬಳಸಿಕೊಂಡಿದ್ದಾರೆ. ಸನ್ನಿವೇಶಕ್ಕೆ ತಕ್ಕಂತಹ ಹಾಡುಗಳನ್ನು ಬಳಸಿಕೊಂಡು ಶರೀಫರ ತತ್ವ ರಸವನ್ನು ಉಣಬಡಿಸಿದ್ದಾರೆ. ಶರೀಫರ ಹುಟ್ಟು ಹೇಗಾಯಿತು, ಬಾಲ್ಯವನ್ನು, ಗುರು ಗೋವಿಂದ ಭಟ್ಟರ ಸಮಾಗಮವನ್ನು, ಶರೀಫರ ಮದುವೆ, ಶರೀಫರ ಕಷ್ಟದ ದಿನಗಳನ್ನು, ಪ್ರಾರಂಭದಲ್ಲಿ ಅವರು ಅನುಭವಿಸಿದ ಜಾತಿ ಧರ್ಮದ ನಿಂದನೆಗಳನ್ನು ಕುರಿತು ಪ್ರಸ್ತುತ ಚಲನಚಿತ್ರದಲ್ಲಿ ಚಿತ್ರಿಸಿದ್ದಾರೆ.

ಆಧುನಿಕತೆಯ ತಂತ್ರಜ್ಞಾನವನ್ನು ಬಳಸಿಕೊಂಡು ಶರೀಫರ ಜೀವನವನ್ನು ಸಿನಿಮಾರಂಗಕ್ಕೆ ತಂದಿದ್ದಾರೆ. ಶಿಶುನಾಳದ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸಂಚರಿಸಿ, ಶರೀಫರು ಓಡಾಡಿದ ಸ್ಥಳಗಳಲ್ಲಿ ಚಿತ್ರವನ್ನು ಚಿತ್ರಿಸಿದ್ದಾರೆ.

**ಪ್ರಶಸ್ತಿಗಳು:**

ಚಿತ್ರವು ಬಿಡುಗಡೆಯಾದಾಗಿನಿಂದ ಈ ಕೆಳಗಿನ ಪ್ರಶಸ್ತಿಗಳನ್ನು ಗೆದ್ದಿದೆ.

ಭಾರತೀಯ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ 1989 ರಾಷ್ಟ್ರೀಯ ಏಕೀಕರಣದ ಅತ್ಯುತ್ತಮ ಚಲನಚಿತ್ರಕ್ಕಾಗಿ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ

198990 ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳು (ಭಾರತ) ಎರಡನೇ ಅತ್ಯುತ್ತಮ ಚಿತ್ರಕ್ಕಾಗಿ ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ

ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಅತ್ಯುತ್ತಮ ನಟ – ಶ್ರೀಧರ್

ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿ ಅತ್ಯುತ್ತಮ ಪೋಷಕ ನಟ – ಗಿರೀಶ್

ಕಾರ್ನಾಡ್

ಸಂತ ಶಿಶುನಾಳ ಶರೀಫ ಅವರು 19 ನೇ ಶತಮಾನದ ಪೌರಾಣಿಕ ಮಿಸ್ಟಿಕ್ ಕವಿ, ತತ್ವಜ್ಞಾನಿ ಮತ್ತು ಸಮಾಜ ಸುಧಾರಕರಾಗಿದ್ದಾರೆ. ಪ್ರಸಿದ್ಧ ಸಂತರು ಕರ್ನಾಟಕದ ಪ್ರದೇಶದಾದ್ಯಂತ ಕೋಮು ಸೌಹಾರ್ದತೆಯನ್ನು ಸ್ಥಾಪಿಸಲು ಶ್ರಮಿಸಿದರು. ಅವರು ತಮ್ಮ ಏಕತಾರೆಯೊಂದಿಗೆ ಟ್ಯೂನ್ ಮಾಡಿದ ಹಾಡುಗಳ ಮೂಲಕ ತಮ್ಮ ಸಂದೇಶಗಳನ್ನು ಹೆಚ್ಚಾಗಿ ತಲುಪಿಸಿದರು.

ಸಂತ ಶಿಶುನಾಳ ಶರೀಫರ ಜೀವನ ಸಂದೇಶವನ್ನು ಚಲನಚಿತ್ರದಲ್ಲಿ ಉತ್ತಮವಾಗಿ ಸೆರೆ ಹಿಡಿದಿದ್ದಾರೆ. ಆಗಿನ ಕಾಲದ ಜನ ಜೀವನದ ಚಿತ್ರಣವನ್ನು ಸುಂದರವಾಗಿ ಚಿತ್ರಿಸುವುದರ ಮೂಲಕ ಶಿಶುನಾಳ ಶರೀಫರ ಜೀವನವನ್ನು ನಾಡಿನ ತುಂಬೆಲ್ಲಾ ಪರಿಚಯಿಸಿದ್ದಾರೆ. ಈ ಚಲನಚಿತ್ರದಲ್ಲಿ ಶರೀಫರ ಪಾತ್ರವನ್ನು ಜನರಿಗೆ ತಲುಪಿಸುವ ಪ್ರಯತ್ನವನ್ನು ಈ ಚಲನಚಿತ್ರ ಮಾಡಿದೆ ಎನ್ನಬಹುದು. ಚಲನಚಿತ್ರದಲ್ಲಿ ಶಿಶುನಾಳ ಶರೀಫರ ಪವಾಡಗಳನ್ನು ಹೆಚ್ಚಾಗಿ ತೋರಿಸಿದ್ದಾರೆ. ಅವರ ಸಾಹಿತ್ಯಿಕ ಮತ್ತು ಕಾವ್ಯತ್ವದ ಗುಣವನ್ನು ಸಹಿತ ಎತ್ತಿ ಹಿಡಿದಿದ್ದಾರೆ. ಸಮಾಜದಲ್ಲಿ ಬದುಕುವ ಮನುಷ್ಯ ಸಮಾನತೆಯ ಹರಿಕಾರನಂತೆ ಬದುಕಬೇಕು ಎಂದು ಹೇಳಿರುವ ಶಿಶುನಾಳ ಶರೀಫರ ವಾಕ್ಯವನ್ನು ಈ ಚಲನಚಿತ್ರದಲ್ಲಿ ತೋರಿಸಿದ್ದಾರೆ. ಅಲ್ಲದೆ ಶಿಶುನಾಳ ಶರೀಫರ ಬಾಲ್ಯದಲ್ಲಿ ಅವರು ಅನುಭವಿಸಿದ ನೋವುಗಳನ್ನು, ಗುರುವಿನ ಆಲಿಂಗನವನ್ನು, ತಂದೆತಾಯಿ ಮಡಿಲಲ್ಲಿ ಬೆಳೆದ ಬಗೆಯನ್ನು, ಗುರುಗಳ ಸಾನ್ನಿಧ್ಯದಲ್ಲಿ ವಿದ್ಯಾಭ್ಯಾಸ ಮಾಡಿದನ್ನು, ಸಾಂಸಾರಿಕ ಬದುಕನ್ನು, ಸಮಾಜಕ್ಕೆ ಬೆಳಕಾದ ಬಗೆಯನ್ನು ಚಿತ್ರದಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ತಂದೆ ತಾಯಿಯ ಮಮತೆಯಲ್ಲಿ ಗುರುವಿನ ಆಶೀರ್ವಾದದಲ್ಲಿ ಬೆಳೆದ ಶರೀಫರು ಸಮಾಜಕ್ಕೆ ಕೊಟ್ಟಿರುವ ಸಂದೇಶ ಮಾತ್ರ ಅಪೂರ್ವವಾದದ್ದು. ಅಂತಹ ಅಪೂರ್ವವಾದ ಸಂದೇಶವನ್ನು ಚಲನಚಿತ್ರದಲ್ಲಿ ಸೆರೆಹಿಡಿದಿದ್ದಾರೆ.

ಈ ಚಲನಚಿತ್ರದಲ್ಲಿ ಬಂದಿರುವ ಪ್ರತಿಯೊಂದು ಶರೀಫರ ತತ್ವಪದಗಳು ಸಿ. ಅಶ್ವತ್ ಅವರ ಧ್ವನಿಯಲ್ಲಿ ಇನ್ನೂ ಇಂಪಾಗಿ ಮೂಡಿರುವುದನ್ನು ಚಲನಚಿತ್ರದಲ್ಲಿ ಗಮನಿಸಬಹುದು. ಸಿ.ಅಶ್ವತ್ ಅವರು ಶಿಶುನಾಳ ಶರೀಫರ ಹಾಡಿಗೆ ಜೀವಕಳೆಯನ್ನು ತುಂಬಿದ ಮೊದಲ ಗಾಯಕರು. ಶಿಶುನಾಳ ಶರೀಫರ ಹಾಡುಗಳನ್ನು ಹಾಡಲಿಕ್ಕೆ ಸಿ.ಅಶ್ವತ್ ಅವರು ಜನ್ಮ ತಾಳಿ ಬಂದಂತೆ ಕಾಣುತ್ತದೆ. ಏಕೆಂದರೆ ಶ್ರೀ ಸಿ.ಅಶ್ವತ್ ಅವರು ಶಿಶುನಾಳ ಶರೀಫರ ಹಾಡುಗಳನ್ನು ಜಗತ್ತಿನಾದ್ಯಂತ ಪ್ರಸರಣಗೊಳ್ಳುವಂತೆ ಮಾಡಿದವರು. ಅವರ ಸಂಗೀತ ಸಂಯೋಜನೆ ಹಾಡುಗಾರಿಕೆ ಜನರ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿಯಿತು. ಇಂತಹ ಹಾಡುಗಳನ್ನು ಸಿ.ಅಶ್ವತ್ ಅವರ ಮೂಲಕ

ಹಾಡಿಸುವುದರ ಮೂಲಕ ಸಂತ ಶರೀಫರ ಸಾಹಿತ್ಯಿಕ ಗುಣವನ್ನು ಮತ್ತು ಸಾಹಿತ್ಯದಲ್ಲಿರುವಂತಹ ಬಲಿಷ್ಠತೆಯನ್ನು ಸಿ.ಅಶ್ವತ್ ಅವರ ಮೂಲಕ ಪರಿಚಯಿಸಿದ್ದಾರೆ. ಅಲ್ಲದೆ ಶರೀಫರು ಬದುಕಿದ ಶರೀಫರು ಓಡಾಡಿದಂತಹ ಪ್ರದೇಶಗಳಲ್ಲಿಯೇ ನೈಜವಾಗಿ ಚಿತ್ರವನ್ನು ಚಿತ್ರಿಸಿದ್ದಾರೆ. ಗುರು ಗೋವಿಂದ ಭಟ್ಟರ ಗ್ರಾಮವಾದ ಕಳಸ, ಸಂತ ಶಿಶುನಾಳ ಶರೀಫರ ಜನ್ಮಸ್ಥಳವಾದ ಶಿಶುನಾಳ, ಗುಡಿಗೇರಿ, ಮಂಡಿಗನಾಳ, ಗೌಡಗೇರಿ, ಚಾಕಲಬ್ಬಿ, ಯರೇಬೂದಿಹಾಳ, ಕ್ಯಾಲುಕೊಂಡ, ಪಾಣಿಗಟ್ಟಿ, ಹೀಗೆ ಶರೀಫರು ಎಲ್ಲೆಲ್ಲಿ ಪವಾಡಗಳನ್ನು ಮಾಡಿದ್ದರು ಅಲ್ಲಲ್ಲಿ ಅವರ ಹಾಡುಗಾರಿಕೆಯ ಸೊಗಸಿನೊಂದಿಗೆ ಅತ್ಯಂತ ಸಂಪದ್ಭರಿತವಾಗಿ ಚಿತ್ರಿಸಿದ್ದಾರೆ.

ಶರೀಫರ ಸಮಕಾಲೀನವರಾಗಿರುವಂತಹ ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳನ್ನು, ನವಲಗುಂದದ ನಾಗಲಿಂಗರನ್ನು, ಆರೂಢರನ್ನು, ಅಂಕಲಿಯ ಅಡಿವೆಪ್ಪಜ್ಜ ಇಂತಹ ಮಹಾನ್ ಪುರುಷರ, ದಾರ್ಶನಿಕರ, ತತ್ವಜ್ಞಾನಿಗಳ ಪಾತ್ರಗಳು ಈ ಚಲನಚಿತ್ರದಲ್ಲಿ ಚಿತ್ರಿಸಿದ್ದಾರೆ. ಶ್ರೀ ಸಿದ್ಧಾರೂಢರ ಮಠದಲ್ಲಿ ಮಾಡಿದ ಪವಾಡವನ್ನು, ನವಲಗುಂದ ನಾಗಲಿಂಗಜ್ಜನ ಸಿದಗಿ ಯಾತ್ರಿಯ ಸನ್ನಿವೇಶವನ್ನು, ಅಲ್ಲದೆ ಲಕ್ಷ್ಮೇಶ್ವರದಲ್ಲಿ ಅಮಾವಾಸ್ಯೆಯನ್ನು ಹುಣ್ಣಿಮೆ ಮಾಡಿದ ಪಿರಿಯನ್ನ, ಯರೇಬೂದಿಹಾಳದಲ್ಲಿ ಗುಗ್ಗುಳದ ಸನ್ನಿವೇಶವನ್ನು, ಚಾಕಲಬ್ಬಿ ಯಲ್ಲಮ್ಮನು ಚಿಲುಮೆ ಸೇದಲು ಬೆಂಕಿ ಕೊಟ್ಟಿದ್ದನ್ನು, ಗುಡಗೇರಿ ದ್ಯಾಮವ್ವ ಮೂಗುನತ್ತನ್ನು ಕೊಟ್ಟ ಸನ್ನಿವೇಶ, ಇಷ್ಟೇ ಅಲ್ಲದೆ ಸಂತ ಶಿಶುನಾಳ ಶರೀಫರು ಮತ್ತು ಗುರು ಗೋವಿಂದ ಭಟ್ಟರ ಇನ್ನೂ ಅನೇಕ ಪವಾಡಗಳನ್ನು ಈ ಚಲನಚಿತ್ರದಲ್ಲಿ ಚಿತ್ರಿಸಿದ್ದಾರೆ. ಚಿತ್ರದ ನಿರ್ದೇಶಕರಾದ ಟಿ.ಎಸ್.ನಾಗಾಭರಣ ಅವರು ಸುಂದರವಾಗಿ ಕಥೆಯನ್ನು ಕಟ್ಟಿಕೊಟ್ಟಿದ್ದಾರೆ.

ಕಥೆಗೆ ಜೀವಕಳೆಯನ್ನು ತುಂಬಿದವರು ಶರೀಫರ ಪಾತ್ರಧಾರಿ ನಟ ಶ್ರೀಧರ್ ಅವರು. ಮತ್ತು ಗೋವಿಂದ ಭಟ್ಟರ ಪಾತ್ರದಲ್ಲಿ ಗಿರೀಶ್ ಕಾರ್ನಾಡರು ಅಭಿನಯಿಸಿದ್ದಾರೆ. ಅಷ್ಟೇ ಅಲ್ಲದೆ ಹೇಮಾ ಚೌದರಿಯವರು ಅಜ್ಜುಮಾ ಪಾತ್ರವನ್ನು ಮಾಡುವುದರ ಮೂಲಕ ಚಲನಚಿತ್ರಕ್ಕೆ ಒಂದು ಜೀವಕಳೆಯನ್ನು ತಂದಿದ್ದಾರೆ. ಅದರ ಜೊತೆಗೆ ಸಹಪಾತ್ರಧಾರಿಗಳೆಲ್ಲರೂ ಸಹಿತ ಉತ್ತಮವಾದ ನಟನೆಯ ಮೂಲಕ ಜನರ ಮನಸ್ಸನ್ನು ಗೆದ್ದಿದ್ದಾರೆ. ಈ ಚಲನಚಿತ್ರ ಬಿಡುಗಡೆಯಾದ ನಂತರ ಪ್ರೇಕ್ಷಕರ ಮನಸ್ಸನ್ನು ತನ್ನತ್ತ ಸೆಳೆದುಕೊಂಡಿದೆ ಎನ್ನುವುದಕ್ಕೆ ಅದಕ್ಕೆ ಬಂದಿರುವ ಅತ್ಯುತ್ತಮ ಪ್ರಶಸ್ತಿ 'ನರ್ಗಿಸ್ ದತ್' ಪ್ರಶಸ್ತಿಯೇ ಇಲ್ಲಿ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಏಕತೆಯನ್ನು ಗುರು ಶಿಷ್ಯರ ಪಾತ್ರದ ಮೂಲಕ ಚಿತ್ರಿಸಿದ್ದಾರೆ. ಗುರು ಗೋವಿಂದ ಭಟ್ಟರು ಮತ್ತು ಶರೀಫರು ಇಬ್ಬರೂ ಹಿಂದೂ ಮತ್ತು ಮುಸ್ಲಿಮರ ನಡುವೆ ಸಹೋದರತ್ವವನ್ನು ಹರಡಲು ಮತ್ತು ಅವರನ್ನು ಒಟ್ಟಿಗೆ ಸೇರಿಸಲು ಶ್ರಮಿಸಿದರು. ಇದರ ಸಂಕೇತವಾಗಿ ಶಿಶುವಿನಹಾಳದಲ್ಲಿರುವ ಸಂತ

ಶರೀಫರ ದೇವಸ್ಥಾನದಲ್ಲಿ ಮುಸಲ್ಮಾನರು ಮತ್ತು ಹಿಂದೂಗಳಿಬ್ಬರೂ ಪೂಜೆ ಸಲ್ಲಿಸುತ್ತಾರೆ.

**ನಾಟಕಗಳು:**

ಡಾ. ಮಲ್ಲಿಕಾರ್ಜುನ ಸಿಂದಗಿ ಕೃತ 'ಶಿಶುನಾಳ ಶರೀಫರ ಮಹಾತ್ಮೆ' ಎನ್ನುವ ನಾಟಕವನ್ನು ಬರೆದಿದ್ದಾರೆ. ನಿರ್ದೇಶನವನ್ನು ಕೆ. ವಸಂತ್‌ಕುಮಾರ್, ಸಂಭಾಷಣೆ ಡಾ.ಮಲ್ಲಿಕಾರ್ಜುನ ಸಿಂದಗಿ, ಸಂಗೀತವನ್ನು ಸಾಧು ಅವರು ಸಂಯೋಜನೆ ಮಾಡಿದ್ದಾರೆ. ಶರೀಫರ ಜೀವನ ವೃತ್ತಾಂತದ ಜೊತೆಗೆ ಶರೀಫರ ಹಾಡುಗಳನ್ನು ಈ ನಾಟಕದಲ್ಲಿ ನೋಡಬಹುದು.

ನನ್ನ ಸಂಶೋಧನೆಯ ಸಂದರ್ಭದಲ್ಲಿ ಸಿಕ್ಕ ಕೈಬರಹದ ಪುಸ್ತಕ ಒಂದರಲ್ಲಿ ಶರೀಫರ ನಾಟಕವಿದೆ. ಅದನ್ನು 1975 ರಲ್ಲಿ ಶ್ರೀ ಯಲ್ಲಪ್ಪ ಮಾವಿನಕಾಯಿ ಸಾ॥ ಚಾಕಲಬ್ಬಿ ಇವರು ಬರೆದಿದ್ದಾರೆ ಎಂದು ಆ ಮನೆತನದವರು ಹೇಳಿದ್ದಾರೆ. ಆದರೆ ರಚನಾಕಾರ ಈಗ ಇಲ್ಲ. ಕೈ ಬರಹದಲ್ಲಿ ಬರೆದಿರುವ ಪ್ರತಿಯಾಗಿದ್ದರಿಂದ ಇಲ್ಲಿಯೂ ಬರೆದವರ ಹೆಸರನ್ನು ಪ್ರಸ್ತಾಪ ಮಾಡಿಲ್ಲ. ಪುಸ್ತಕವು ಹಳೆಯದ್ದಾಗಿರುವುದರಿಂದ ಮುಖಪುಟದಲ್ಲಿ ಬರೆದಿರುವ ಅಕ್ಷರಗಳು ಅಳಿಸಿರ ಬಹುದು. ಈ ನಾಟಕದ ಹೆಸರು 'ಶ್ರೀ ಸದ್ಗುರು ಶರೀಫ ಶಿವಯೋಗಿ'. ನಾಂದಿ ಗೀತೆಯೊಂದಿಗೆ ಪ್ರಾರಂಭವಾಗುವ ನಾಟಕ ಶರೀಫರು ದೇಹ ಬಿಡುವವರೆಗೂ ಇದೆ. ನಾಟಕದಲ್ಲಿ ಹಾಸ್ಯ ಪಾತ್ರಗಳ ಮೂಲಕ ಮನರಂಜನೆ ನೀಡುವುದರ ಜೊತೆಗೆ ಶರೀಫರು ಸಾರಿದ ಭಾವೈಕ್ಯತೆ, ಸಮಾಜದಲ್ಲಿ ಹೇಗೆ ಬದುಕಬೇಕು, ಪವಾಡಗಳು, ಶಾಪ, ಗುರುವಿನ ಭಕ್ತಿ, ಸಂಸಾರದ ಚಿತ್ರಣ ಹೀಗೆ ಶರೀಫ ಜೀವನದ ಪ್ರಮುಖ ಅಂಶಗಳನ್ನು ಕುರಿತು ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ.

ಶರೀಫರ ತತ್ವಚಿಂತನೆಗಳು ನಾಡಿನಾದ್ಯಂತ ಇವೆ ಎನ್ನುವುದಕ್ಕೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಸಾಂಸ್ಕೃತಿಕ ಭವನದಲ್ಲಿ ಸಂತ ಶಿಶುನಾಳ ಶರೀಫರ ಜೀವನ ವೃತ್ತಾಂತವನ್ನು ಒಳಗೊಂಡ 'ಶಿಶುನಾಳ ಶರೀಫ' ಎನ್ನುವ ಹೆಸರಿನ ನಾಟಕವನ್ನು ಚಿತ್ರದುರ್ಗದ ಜಮುರಾ ನಾಟಕ ತಂಡದ ಕಲಾವಿದರು ಅಭಿನಯಿಸುವುದರ ಮೂಲಕ ಪ್ರದರ್ಶನ ಮಾಡಿದ್ದಾರೆ.

'ಸಂತ ಶಿಶುನಾಳ ಶರೀಫ ಶಿವಯೋಗಿ ನಾಟ್ಯ ಸಂಘ ತೆಗ್ಗಿಹಳ್ಳಿ' 2019 ರಲ್ಲಿ ಪ್ರಾರಂಭವಾದ ಈ ಕಂಪನಿ ಖಾಜೆಸಾಬ್ ಬಡಿಗೇರ ಅವರ ಮಾಲಿಕತ್ವದಲ್ಲಿ ನಡೆಯುತ್ತದೆ. ಸಾಮಾಜಿಕ ನಾಟಕಗಳನ್ನು, ಭಕ್ತಿ ಪ್ರಧಾನ ನಾಟಕಗಳನ್ನು ಆಡುತ್ತಾರೆ. ಇವರು ಶಿಶುನಾಳ ಶರೀಫರ ನಾಟಕವನ್ನು ಆಡುತ್ತಾರೆ. ಜನರಿಗೆ ಮನರಂಜನೆ ನೀಡುತ್ತಾ ನೀತಿ ಪರ ಸಂದೇಶಗಳನ್ನು ನೀಡುತ್ತಾರೆ.

'ನವಲಗುಂದ ನಾಗಲಿಂಗ ಲೀಲೆ' ಈ ನಾಟಕದಲ್ಲಿ ಶರೀಫರ ಪಾತ್ರದ ಪ್ರವೇಶವಿದೆ. ಈ ನಾಟಕವನ್ನು ಪಂಡಿತ ಪಂಚಾಕ್ಷರಿ ನಾಟ್ಯ ಸಂಘ ಗದಗ ಅವರು ಪ್ರತಿ ಕ್ಯಾಂಪಿನ ಮುಕ್ತಾಯದಲ್ಲಿ ಈ ನಾಟಕವನ್ನು ಆಡುತ್ತಾರೆ. ಈ ಕಂಪನಿಯಲ್ಲಿ ಹೆಣ್ಣು ಮಕ್ಕಳ ಪಾತ್ರವನ್ನು ಗಂಡಸರೇ ಪಾತ್ರಮಾಡುತ್ತಾರೆ. ಇದು ಪುಟ್ಟರಾಜ ಗವಾಯಿಗಳ ಆಶಯವಂತೆ ಇಂದಿಗೂ ಹಾಗೆ ನಡೆದುಕೊಂಡು ಬಂದಿದೆ. ಕೊಟ್ರೇಶ ಅಣ್ಣನವರು ನಾಗಲಿಂಗಜ್ಜನ ಪಾತ್ರವನ್ನು ಅದ್ಭುತವಾಗಿ ಮಾಡುತ್ತಾರೆ. ಶರೀಫರ ಪಾತ್ರವನ್ನು ವಿನೋದ ಎನ್ನುವವರು ಅದ್ಭುತವಾಗಿ ಮಾಡಿದ್ದಾರೆ. ಶರೀಫರ ಸಾಮಾಜಿಕ ಚಿಂತನೆಯ ಜೊತೆಗೆ ಕೋಳಿವಾಡ ಗ್ರಾಮದ ದ್ಯಾಮವ್ವನ ವಿಗ್ರಹವನ್ನು ಸುಟ್ಟು ಮೈ ಕಾಯಿಸಿಕೊಂಡ ದೃಶ್ಯವಿದೆ. ಶರೀಫರು ನೀಡಿದ ಶಾಪದ ಬಗ್ಗೆ ಈ ನಾಟಕದಲ್ಲಿ ನೋಡಬಹುದಹು.

ಹೀಗೆ ಶರೀಫರ ಕುರಿತು ಇನ್ನು ಅನೇಕ ನಾಟಕಗಳನ್ನು ಆಡುತ್ತಾರೆ. ಆದರೆ ಆ ನಾಟಕಗಳು ಬರೆದವರು ಯಾರು ಎಂದು ಕೇಳಿದಾಗ ನಮಗೆ ಗೊತ್ತಿಲ್ಲಾ ಎನ್ನುವ ಉತ್ತರ ಬರುತ್ತದೆ. ಮತ್ತೆ ನೀವು ರಂಗದ ಮೇಲೆ ಹೇಗೆ ಪ್ರದರ್ಶನ ಮಾಡುತ್ತೀರಿ ಎಂದು ಕೇಳಿದಾಗ ನಾವು ನಮ್ಮ ಹಿರಿಯರು ಹೇಳಿ ಕೊಟ್ಟಹಾಗೆ ಅಭಿನಯ ಮಾಡಿದ್ದೇವೆ ಎನ್ನುತ್ತಾರೆ. ಶಿಶುನಾಳ ಗ್ರಾಮದ ನಾಟಕ ಪ್ರಿಯರು. ಶರೀಫರ ಬದುಕನ್ನು ಮತ್ತು ಜೀವನವು ಮತ್ತು ಅವರ ತತ್ವಪದಗಳು ನಮಗೆ ಬಾಯಿಪಾಠವಾಗಿವೆ. ಅದನ್ನು ಓದಿಕೊಂಡು ಅಭಿನಯಿಸುವುದು ತುಂಬಾ ಕಡಿಮೆ ಎನ್ನುತ್ತಾರೆ. ನಾವು ನಮ್ಮ ಮುಂದಿನ ಪೀಳಿಗೆಗೆ ನಮ್ಮ ಹಿರಿಯರು ಹೇಳಿಕೊಟ್ಟಹಾಗೆ ಹೇಳಿಕೊಡುತ್ತೇವೆ. ಅವರು ಅದನ್ನು ಮುಂದು ವರೆಸಿಕೊಂಡು ಹೋಗುತ್ತಾರೆ. ಶರೀಫರ ಜಾತ್ರೆಯಲ್ಲಿ ಶರೀಫರ ನಾಟಕವನ್ನು ಬಹಳ ಸಾರಿ ಆಡಿದ್ದೇವೆ. ಆದರೆ ಇಂದಿನ ದಿನಗಳಲ್ಲಿ ನಾಟಕಗಳು ತಮ್ಮ ಕಳೆಯನ್ನು ಕಳೆದುಕೊಂಡಿವೆ. ಜನರು ಕೇವಲ ಸಿನಿಮಾ, ಧಾರವಾಹಿ ಎನ್ನುತ್ತಾರೆ ಹೊರತು ನಾಟಕವೆನ್ನುವುದಿಲ್ಲಾ ಇದರಿಂದಾಗಿ ನಾಟಕಗಳು ಇಂದು ಕಡಿಮೆ ಪ್ರಮಾಣದಲ್ಲಿ ಪ್ರದರ್ಶನ ಗೊಳ್ಳುತ್ತವೆ.

ಒಬ್ಬ ಕಲಾವಿದ ಒಂದು ಹಾಡನ್ನು ಹಾಡುತ್ತಾನೆಂದರೆ ಆತ ಒಂದು ಕಾಲಕ್ಕೆ ಹಾಡಿನ ಪರಂಪರೆಯನ್ನು ಉಳಿಸುವ ಮತ್ತು ಹೊಸದನ್ನ ಸೃಷ್ಟಿಸುವ ಎರಡು ಕೆಲಸಗಳನ್ನು ಮಾಡುತ್ತಿರುತ್ತಾನೆ. ಈ ಉಳಿಸುವ ಮತ್ತು ಸೃಷ್ಟಿಸುವ ಪರಿ ಪ್ರತಿಯೊಬ್ಬ ಹಾಡುಗಾರನಲ್ಲೂ ಬದಲಾಗಿರುತ್ತದೆ. ಪ್ರತಿಭಾವಂತ ಹಾಡುಗಾರನು ಒಂದೇ ಹಾಡನ್ನು ಎರಡು ಸಲ ಹಾಡಿದರೂ ಎರಡು ಹಾರೈಕೆ ಎರಡು ಹಾಡುಗಾರಿಕೆಗಳು ಭಿನ್ನವಾಗಿ ಉಳಿಯುತ್ತವೆ ಕಾರಣ ಜಾನಪದ ಗೀತೆಗಳು ಹಾಡುವುದಕ್ಕಾಗಿ ರಚಿತಗೊಂಡು ಹೋಗಲ್ಲ ಅವು ಹಾಡುವಾಗಲೇ ಸೃಷ್ಟಿಗೊಳ್ಳುವಂತಹವು ಜನಪದ ಹಾಡುಗಾರನೆಂದರೆ ಸಿದ್ಧ ಮಾದರಿಯ ಧನುಷ್ ಎಲ್ಲ ಹಾಡುಗಾರನೆಂದರೆ ಆತನಲ್ಲಿ ಹಾಡುಗಾರ

ಪ್ರದರ್ಶನ ಕಾರ ಕವಿ ಮೂರು ಏಕಕಾಲಕ್ಕೆ ಕಾರ್ಯ ಪ್ರವೃತ್ತರು ವಿಸ್ಮಯ ಕಲಾವಿದನಿಗೆ ಹಾಲು ಪ್ರದರ್ಶನ ಪ್ರಯೋಗ ಸೃಷ್ಟಿ ಇವೆಲ್ಲ ಒಂದೇ ಕ್ರಿಯೆ ಭಿನ್ನ ನೆಲೆಗಳಷ್ಟೇ ಕಲಿಕೆಯ ವಿವಿಧ ಹಂತದಲ್ಲಿ ಕಲಿಯುವ ಈ ಸಂಗತಿಗಳು ಪ್ರಯೋಗದ ವಿವಿಧ ಹಂತಗಳಲ್ಲೂ ಕ್ರಿಯಾತ್ಮಕವಾಗಿರುತ್ತದೆ ಎಳೆಯ ಹಾಡುಗಾರನೊಬ್ಬ ಮೊದಲು ಗುಂಪಿನಲ್ಲಿ ಅನುಭವಿ ಹಾಡುಗಾರ ಹಾಡುವುದನ್ನ ತನ್ಮಯನಾಗಿ ಆಲಿಸುತ್ತಾನೆ ಆ ಮೂಲಕ ಹಾಡುಗಾರಿಕೆಯ ಕ್ರಮ ಹಾಡಿನ ದಾಟಿ ಲಯಗಾರಿಕೆ ವಸ್ತು ಮುಂತಾದ ಹಾಡಿನ ವಿನ್ಯಾಸಗಳನ್ನು ಪರಿಚಯ ಮಾಡಿಕೊಂಡು ಆತ ಗುಂಪಿನಲ್ಲಿ ಹಾಡುವುದಷ್ಟೇ ಅಲ್ಲದೆ ಆತ ವೈಯಕ್ತಿಕವಾಗಿ ಏಕಾಂಗಿಯಾಗಿ ಆ ಹಾಡುಗಳನ್ನು ಮೆಲುಕು ಹಾಕಲು ಪ್ರಯತ್ನಿಸುತ್ತಾನೆ.

**ಪರಾಮರ್ಶನ ಗ್ರಂಥಗಳು:**


1. ಶಿವಾನಂದ ಗುಬ್ಬಣ್ಣವರ (ಸಂ), (1981), ಬರಕೋ ಪದ ಬರಕೋ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ಶಿವಾನಂದ ಗುಬ್ಬಣ್ಣನವರ, (1992), ಶಿಶುನಾಳ ಶರೀಫ್ ಸಾಹೇಬರು, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಹಗಡ ಜಿ. ಎಂ, (1997), ಶ್ರೀ ಶಿಶುನಾಳ ಶರೀಫರ ತತ್ವಪದಗಳು, ಪುಸ್ತಕ ಲೋಕ, ಧಾರವಾಡ.
4. ಹಡಗಲಿ ಜೆ.ಎ, (2009), ಕನ್ನಡ ಹವ್ಯಾಸಿ ರಂಗಭೂಮಿಒಂದು ಅಧ್ಯಯನ, ಚಂದ್ರನಾಥ ಪ್ರಕಾಶನ, ಧಾರವಾಡ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.